ಈ ಲೇಖನದ ವಿಷಯಾನುಕ್ರಮಣಿಕೆ


**ದೇವರ ಅಸ್ತಿತ್ವ 5/8** 2

**ಪುನರ್ಜನ್ಮದ ಸಮರ್ಥನೆ.** 2

**ಜನ್ಮಾಂತರಗಳನ್ನು ಒಪ್ಪಬೇಕಾದ ಅನಿವಾರ್ಯತೆ** 4




# ದೇವರ ಅಸ್ತಿತ್ವ 5/8

## ಪುನರ್ಜನ್ಮದ ಸಮರ್ಥನೆ.

ಜೀವನ ಅಸ್ತಿತ್ವ ಸಮರ್ಥಿಸಿದ ನಂತರ ಜನ್ಮಾಂತರಗಳ ಅಸ್ತಿತ್ವದ ಕುರಿತ ಚರ್ಚೆ ಆರಂಭವಾಗುತ್ತದೆ. ದೇಹ ಜೀವನಲ್ಲ ಎಂದಾದ ಬಳಿಕ, ದೇಹ ಸತ್ತರೆ ಅದರೊಳಗಿನ ಜೀವ ಏನಾಗುತ್ತಾನೆ, ದೇಹ ನಿರ್ಮಾಣವಾಗುವ ಮೊದಲು ಎಲ್ಲಿದ್ದ ಎಂಬ ಪ್ರಶ್ನೆಗಳನ್ನಿಟ್ಟುಕೊಂಡು ತತ್ವವನ್ನು ಹುಡಕಲು ಆರಂಭಿಸಿದರೆ ಮೊದಲು ನಮ್ಮ ಕೈಗೆ ಎಡತಾಕುವದು ಜನ್ಮಾಂತರಗಳು.

ಜಡವಾದ ದೇಹವೇ ಜೀವ ಎಂದು ಭ್ರಾಂತರಾಗಿರುವ ನಾಸ್ತಿಕರು ಜನ್ಮಾಂತರಗಳನ್ನಂತೂ ಖಂಡಿತ ಒಪ್ಪುವದಿಲ್ಲ. ಒಪ್ಪದೇ ಇರುವದಕ್ಕೆ ಕಾರಣವನ್ನೂ ನೀಡಿಲ್ಲ. ಆದರೆ ದೇಹವೇ ಜೀವ ಎಂಬ ಅವರ ಸಿದ್ಧಾಂತದ

ಮೂಲವನ್ನೇ ಕಡಿದು ಹಾಕಿ, ದೇಹದಿಂದ ಭಿನ್ನನಾದ ಜೀವನೊಬ್ಬನಿದ್ದಾನೆ ಎಂದು ಪ್ರತಿಪಾದಿಸಿದ ಮೇಲೆ ಪುನರ್ಜನ್ಮದ ಅಸ್ತಿತ್ವವನ್ನೂ ಪ್ರತಿಪಾದಿಸಬೇಕು. ತತ್ವವಾದ ಈ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದೆ.

**ಜನ್ಮಾಂತರಗಳ ಸಮರ್ಥನೆಗೆ ಶ್ರೀಮದಾಚಾರ್ಯರು ನೀಡಿರುವ ಕಾರಣಗಳು ಎರಡು. ಒಂದು, ಸಕಲ ಜೀವ ಜಂತುಗಳಲ್ಲಿ ಹುಟ್ಟಿದ ತಕ್ಷಣ ಕಂಡು ಬರುವ ಪ್ರವೃತ್ತಿಗಳು. ಎರಡನೆಯದು ಸಾಮಾನ್ಯವಾಗಿ ಮನುಷ್ಯರಲ್ಲಿ ಹೆಚ್ಚಾಗಿ ಕಂಡುಬರುವ ಹಿಂದಿನ ಜನ್ಮದ ಸ್ಮರಣೆಗಳು.**

ಮೊದಲನೆಯ ಕಾರಣದ ಪೂರ್ಣ ವಿವರಣೆ ಅನುವ್ಯಾಖ್ಯಾನ ನ್ಯಾಯಸುಧಾ ಗ್ರಂಥಗಳ ಮೂರನೆಯ ಅಧ್ಯಾಯದ ಸಂಧ್ಯಾಧಿಕರಣದಲ್ಲಿ ದೊರೆಯುತ್ತದೆ. ಎರಡನೆಯದು, ಬ್ರಹ್ಮಸೂತ್ರಗಳ ಆರಂಭದ ಮೂರನೆಯ ಅಧಿಕರಣಕ್ಕೆ ಸಂಬಂಧಿಸಿದ ಭಾಷ್ಯ, ಟೀಕಾ, ತತ್ವಪ್ರದೀಪಗಳಲ್ಲಿ ವಿವೃತವಾಗಿವೆ.

**ಆಚಾರ್ಯರು ನೀಡಿರುವ ಮೊದಲನೆಯ ಕಾರಣ, ಜನ್ಮಾಂತರಗಳ ಅಸ್ತಿತ್ವವನ್ನು ಒಪ್ಪಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. ಎರಡನೆಯ ಕಾರಣ ಅದಕ್ಕೆ ಪ್ರತ್ಯಕ್ಷದ ಪುರಾವೆಯನ್ನೊದಗಿಸಿ ತತ್ವವನ್ನು ಸುಭದ್ರಗೊಳಿಸುತ್ತದೆ.**

## ಜನ್ಮಾಂತರಗಳನ್ನು ಒಪ್ಪಬೇಕಾದ ಅನಿವಾರ್ಯತೆ

ಆಗ ತಾನೇ ಹುಟ್ಟಿದ ಕೂಸಿನ ಆಹಾರ ತಾಯಿಯ ಎದೆ ಹಾಲು. ಹುಟ್ಟಿದ ಕೂಸನ್ನು ತೆಗೆದುಕೊಂಡು ತಾಯಿ ಎದೆಗವಚಿಕೊಂಡರೆ ಮಗು ಮೊಲೆಯನ್ನು ಚೀಪುತ್ತ ಹಾಲು ಕುಡಿಯಲು ಆರಂಭಿಸುತ್ತದೆ. ಅಂದರೆ ಮಗುವಿಗೆ “ಹಾಲು ನನಗೆ ಬೇಕು. ಅದನ್ನು ಪಡೆಯಲು ನಾನು ಬಾಯಲ್ಲಿರುವದನ್ನು (ತಾಯಿಯ ಮೊಲೆಯನ್ನು )ಚೀಪಬೇಕು” ಎಂಬ ಎರಡು ಜ್ಞಾನಗಳಿವೆ ಎಂದಾಯಿತು. ಇಲ್ಲದಿದ್ದರೆ ಮಗು ಹಾಲು ಕುಡಿಯಲು ಸಾಧ್ಯವಿಲ್ಲ. ತಾಯಿ ಮೊಲೆತೊಟ್ಟನ್ನು ಮಗುವಿನ ಬಾಯಲ್ಲಿಡುತ್ತಾಳಷ್ಟೇ ಹೊರತು ಹೀಗೆ ಚೀಪಬೇಕು ಎನ್ನುವದನ್ನು ಹೇಳಿಕೊಟ್ಟಿರುವದಿಲ್ಲ. ಆಗ ತಾನೇ ಹುಟ್ಟಿದ

ಕೂಸಿಗೆ ಹೇಳಿ ಕೊಡಲು ಸಾಧ್ಯವೂ ಇಲ್ಲ. ಆದರೂ ಮಗುವು ತಾನಾಗಿಯೇ ಚೇಪುತ್ತ ಹಾಲನ್ನು ಪಡೆಯುತ್ತದೆ.

ಪ್ರಾಣಿಗಳಲ್ಲಂತೂ ಈ ಪ್ರಕ್ರಿಯೆ ಇನ್ನೂ ಸ್ಪಷ್ಟವಾಗಿ ಗೊಚರಿಸುತ್ತದೆ. ಹಸು, ಮೇಕೆ, ನಾಯಿ ಮುಂತಾದ ಪ್ರಾಣಿಗಳು ಹುಟ್ಟಿದ ತಕ್ಷಣ ತಮ್ಮ ತಾಯಿಯ ಕೆಚ್ಚಲನ್ನು ಹುಡುಕಿ, ಚೇಪಿ ಹಾಲನ್ನು ಪಡೆಯುತ್ತವೆ. ಹಸು ಮನುಷ್ಯರ ರೀತಿ ತನ್ನ ಕೆಚ್ಚಲನ್ನು ಕರುವಿನ ಬಾಯಲ್ಲಿಡುವದಿಲ್ಲ.  ಅಂದರೆ ಈ ಪ್ರಾಣಿಗಳಿಗೆ

‘‘ನನಗೆ ಹಾಲು ಬೇಕು’’,
‘‘ಆ ಹಾಲು ತಾಯಿಯ ಕೆಚ್ಚಲಿನಲ್ಲಿರುತ್ತದೆ.’’,
‘‘ಆ ಕೆಚ್ಚಲು ತಾಯಿಯ ದೇಹದಲ್ಲಿ ಇಂಥ ಪ್ರದೇಶದಲ್ಲಿರುತ್ತದೆ’’,
‘‘ಅದನ್ನು ಚೇಪಿದರೆ ಹಾಲು ದೊರೆಯುತ್ತದೆ’’,
‘‘ಒಂದು ಕೆಚ್ಚಲಿನಲ್ಲಿ ಮುಗಿದರೆ ಮತ್ತೊಂದನ್ನು ಚೇಪಬೇಕು’’ ಎಂಬ ಐದು ಜ್ಞಾನಗಳಿರುತ್ತವೆ.

ಮನುಷ್ಯರಿಗೆ ‘‘ನನಗೆ ಹಾಲು ಬೇಕು’’

“ಬಾಯಲ್ಲಿರುವದನ್ನು ಚೀಪಿದಾಗ ಹಾಲು ದೊರೆಯುತ್ತದೆ”

ಎಂಬ ಎರಡೇ ಜ್ಞಾನಗಳಿರುತ್ತವೆ.

ಹಾಲು ಮುಗಿದದ್ದನ್ನು ತಿಳಿದು ತಾಯಿಯೇ ತನ್ನ ಮತ್ತೊಂದು ಮೊಲೆಯನ್ನು ಚೀಪಲು ನೀಡಿದಾಗ ಮಾತ್ರ ಮಗುವಿಗೆ ಹಾಲು ದೊರೆಯುತ್ತದೆ. ಇಲ್ಲದಿದ್ದರೆ ಹಾಲಿನ ಒರೆತ ನಿಂತಿದ್ದರೂ ದೊರೆಯುತ್ತದೆ ಎಂಬ ಆಸೆಯಿಂದ ಮಗು ಸುಮ್ಮನೆ ಚೀಪುತ್ತಿರುತ್ತದೆ.

ಹಾಗೆಯೇ ಎಲ್ಲ ಪ್ರಾಣಿಗಳಿಗೂ ತಮಗೆ ಯಾವ ಪ್ರಾಣಿಯಿಂದ ಭಯ ಉಂಟಾಗುತ್ತದೆ ಎಂದು ಸ್ಪಷ್ಟವಾಗಿ ತಿಳಿದಿರುತ್ತದೆ. ಅದಕ್ಕಾಗಿಯೇ ಜಿಂಕೆ ಮರಿ ಹುಲಿಯನ್ನು ಕಂಡು ಬೆದರುತ್ತದೆ. ಆನೆಮರಿ ಸಿಂಹವನ್ನು ಕಂಡು ನಡುಗುತ್ತದೆ. ಹಾವಿನ ಮರಿ ಹದ್ದನ್ನು ಕಂಡೊಡನೆ ಅಡಗಿಕೊಳ್ಳುತ್ತದೆ. ಹೀಗೆ ನನಗಿದರಿಂದ ಅಪಾಯವಿದೆ ಎಂದು ಪ್ರತಿಯೊಂದು ಪ್ರಾಣಿಗೂ ಹುಟ್ಟಿನಿಂದಲೇ ಜ್ಞಾನವಿರುತ್ತದೆ.

ಒಮ್ಮೆ ಹುಲಿ ಸಿಂಹ ಹದ್ದುಗಳ ಆಕ್ರಮಣಕ್ಕೆ ಒಳಗಾಗಿ, ಪ್ರಯಾಸಪಟ್ಟು ತಾನದರಿಂದ ಪಾರಾಗಿ, ಇನ್ನು ಮುಂದೆ ನಾನಿವುಗಳಿಂದ ಎಚ್ಚರವಾಗಿರಬೇಕು ಎಂದು ಅನುಭವದಿಂದ ತಂದುಕೊಂಡ ಜ್ಞಾನವಲ್ಲ. ಸಹಜ ಜ್ಞಾನ. ಮತ್ತು ತಮ್ಮ ತಮ್ಮ ಜಾತಿಯ ಪ್ರಾಣಿಗಳ ಮಧ್ಯದಲ್ಲಿ ನಿರ್ಭಯವಾಗಿ ಇರುತ್ತವೆ. ಅಂದರೆ ಇವುಗಳಿಂದ ನಮಗೆ ಭಯವಿಲ್ಲ ಎಂಬ  ಜ್ಞಾನವೂ ಅವಕ್ಕೆ ಸಹಜವಾಗಿ ಇರುತ್ತದೆ. ಹಾಗೆಯೇ, ಯಾವ ಪ್ರಾಣಿಯೂ ಬೆಂಕಿಯಿದ್ದರೆ ಅದರ ಬಳಿ ಹೋಗುವದಿಲ್ಲ. ಚೂಪಾದ, ತಮ್ಮ ಮೈಯನ್ನು ಹರಿದು ಹಾಕಬಲ್ಲ ಮುಳ್ಳಿನಂತಹ ವಸ್ತುಗಳಿಗೆ, ಮುಳ್ಳಿನ ಮರಗಳಿಗೆ ನೆವೆಯಾದಾಗ ತಮ್ಮ ದೇಹವನ್ನು ತಿಕ್ಕುವದಿಲ್ಲ. ಅಂದರೆ ಈ ವಸ್ತುವಿನಿಂದ ನಮಗೆ ತೊಂದರೆಯಾಗುತ್ತದೆ ಎಂಬ ಜ್ಞಾನ ಅವಕ್ಕಿರುತ್ತವೆ. ಯಾರೂ ಹೇಳಿಕೊಟ್ಟಿರುವದಿಲ್ಲ.

ಸಕಲ ಜೀವಜಂತುಗಳಲ್ಲಿ ಸಹಜವಾಗಿ ಕಂಡು ಬರುವ ಈ ತರಹದ ಪ್ರವೃತ್ತಿಗಳು ಜನ್ಮಾಂತರಗಳ ಅಸ್ತಿತ್ವವನ್ನು ಸಮರ್ಥಿಸುವ ಪ್ರಬಲ ಪುರಾವೆಗಳು

ಎಂದು ಆಚಾರ್ಯರು ಪ್ರತಿಪಾದಿಸುತ್ತಾರೆ. ಟೀಕಾಕೃತ್ಪಾದರು ತುಂಬ ಸೊಗಸಾಗಿ ಈ ಪ್ರಮೇಯವನ್ನು ಮಂಡಿಸಿದ್ದಾರೆ.

ಜ್ಞಾನ ಎಂದಾದ ಮೇಲೆ ಅದು ಹುಟ್ಟಿರಲೇ ಬೇಕು. "ನಾನು" ಎಂಬ ತಿಳುವಳಿಕೆಯನ್ನು ಬಿಟ್ಟು ನಮ್ಮ ಉಳಿದೆಲ್ಲ ತಿಳುವಳಿಕೆಗಳೂ ಹುಟ್ಟಿದವೇ. ಹುಟ್ಟಿದೆ ಎಂದಾದ ಮೇಲೆ ಅದಕ್ಕೆ ಕಾರಣವಿರಬೇಕು. ಜ್ಞಾನದ ಹುಟ್ಟಿಗೆ ಮೂರು ಕಾರಣಗಳು. ಒಂದು ನಮ್ಮ ಇಂದ್ರಿಯಗಳು. ಎರಡನೆಯದು ಯುಕ್ತಿ. ಮೂರನೆಯದು ಆಗಮ.

ನಾವು ಚರ್ಚೆ ಮಾಡುತ್ತಿರುವ "ಈ ವಸ್ತುವು ನನ್ನ ಸಂತೋಷ ಕ್ಕೆ ಕಾರಣ", "ಈ ವಸ್ತುವು ನನ್ನ ದುಃಖಕ್ಕೆ ಕಾರಣ", "ಹೀಗೆ ಚೇಪಿದರೆ ನನಗೆ ಹಾಲು ದೊರೆಯುತ್ತದೆ" ಎಂಬ ಮೂರು ಜ್ಞಾನಗಳು ಯಾರಿಗೂ ಇಂದ್ರಿಯದಿಂದ ಹುಟ್ಟಿ ಬರಲು ಸಾಧ್ಯವಿಲ್ಲ.

ಏಕೆಂದರೆ "ಇದಕ್ಕೆ ಅದು ಕಾರಣ"ಎಂಬುದು ನಮ್ಮ ಇಂದ್ರಿಯಗಳಿಗೆ ತೋರುವ ವಿಷಯವಲ್ಲ. ಕೇವಲ

ಆಗಮ ಮತ್ತು ಯುಕ್ತಿಗಳಿಂದ ತಿಳಿಯಬಹುದಾದದ್ದು.

ಅಂದರೆ “ಈ ವಸ್ತುವಿನಿಂದ ಇಂಥ ಕಾರ್ಯವಾಗುತ್ತದೆ” ಎಂದು ಅದನ್ನು ತಿಳಿದವರು ನಮಗೆ ತಿಳಿಸಬೇಕು. ಅಥವಾ ನಾವೇ ಪ್ರಯೋಗ ಮಾಡಿ ಅನುಭವಕ್ಕೆ ತಂದುಕೊಂಡು ಯಾವುದಿದ್ದಾಗ ಮಾತ್ರ ಯಾವ ಕಾರ್ಯ ಉಂಟಾಗುತ್ತದೆಯೋ, ಯಾವುದಿಲ್ಲದಿದ್ದಾಗ ಉಂಟಾಗುವದಿಲ್ಲವೋ ಅದು ಈ ಕಾರ್ಯಕ್ಕೆ ಕಾರಣ ಎಂದು ಯುಕ್ತಿಯಿಂದ ನಿಶ್ಚಯಿಸಬಹುದು.

ಆಗ ತಾನೇ ಹುಟ್ಟಿರುವ ಮಗುವಿಗೆ, ಪ್ರಾಣಿಗಳಿಗೆ ಯಾರೂ ಹಾಲನ್ನು ಕುಡಿಯುವದಿರಿಂದ ಹೊಟ್ಟೆ ತುಂಬುತ್ತದೆ, ಹಾಲನ್ನು ಕುಡಿಯುವ ಕ್ರಮ ಹೀಗೆ, ಎಂದು ಹೇಳಿಕೊಟ್ಟಿರುವದಿಲ್ಲ, ಹೇಳಿಕೊಡಲು ಸಾಧ್ಯವೂ ಇಲ್ಲ. ಹೀಗಾಗಿ ಈ ಜ್ಞಾನಗಳು ಇನ್ನೊಬ್ಬರು ಹೇಳಿಕೊಟ್ಟಿದ್ದರಿಂದ ಬಂದದ್ದಲ್ಲ. ಇನ್ನು, ಆಗ ತಾನೇ ಹುಟ್ಟಿದ ಪ್ರಾಣಿಗಳ ಪ್ರವೃತ್ತಿಯ ಬಗ್ಗೆ ನಾವು ಚರ್ಚೆ ಮಾಡುತ್ತಿರುವದರಿಂದ, ಅವು ಈಗಾಗಲೇ ಪ್ರಯೋಗ ಮಾಡಿ ಅನುಭವಕ್ಕೆ

ತಂದುಕೊಂಡು ಹಾಲನ್ನು ಕುಡಿಯುತ್ತಿವೆ ಎಂದು ಒಪ್ಪಲಾಗುವದಿಲ್ಲ. ಹುಟ್ಟಿದ ಮಗುವಾಗಲೀ, ಪ್ರಾಣಿಗಳಾಗಲಿ ಮೊದಲನೆಯ ಬಾರಿಯೇ ಸಾಕಷ್ಟು ದಿವಸಗಳ ಅನುಭವವಿರುವ ಹಾಗೆ ಮೊಲೆ ಚೀಪಿ ಹಾಲು ಕುಡಿಯುವದು ಸ್ಪಷ್ಟವಾಗಿ ಗೋಚರಿಸುತ್ತದೆ.

ಇಷ್ಟು ವಿಷಯಗಳ ನೆಲೆಗಟ್ಟಿನ ಮೇಲೆ ಟೀಕಾಕೃತ್ಪಾದರು ಆಚಾರ್ಯರ ಮಾತುಗಳನ್ನು ಹೀಗೆ ವಿವರಿಸಿದ್ದಾರೆ.
ಯಾವುದೇ ಜ್ಞಾನ ನಮಗಿರಬೇಕಾದರೂ ಅದು ಪ್ರತ್ಯಕ್ಷ, ಯುಕ್ತಿ ಅಥವಾ ಆಗಮಗಳಿಂದ ಹುಟ್ಟಿ ಬಂದಿರಬೇಕು. ಎಲ್ಲ ಜ್ಞಾನಗಳೂ ಜನ್ಯಜ್ಞಾನಗಳೇ.

ಅದರಲ್ಲಿಯೂ ''ಈ ಕಾರ್ಯಕ್ಕೆ ಇದು ಕಾರಣ'' ಎಂಬ ಜ್ಞಾನ ಎಂದೆಂದಿಗೂ ಜನ್ಯವಾದದ್ದೇ.

ಆದರೆ ಸಕಲ ಪ್ರಾಣಿಗಳಲ್ಲಿರುವ ಈ ಕಾರ್ಯಕಾರಣದ ಜ್ಞಾನ ಪ್ರತ್ಯಕ್ಷದಿಂದ ಹುಟ್ಟಿ ಬರಲು ಸಾಧ್ಯವಿಲ್ಲ. ಯಾರೂ ಬಂದು ಹೇಳಿಕೊಟ್ಟಿಲ್ಲವಾದ್ದರಿಂದ ಆಗಮಜನ್ಯವಲ್ಲ.

ತಾವಾಗಿಯೇ ಪ್ರಯೋಗ ಮಾಡಿ ಕಲಿತಿಲ್ಲ. ಆದ್ದರಿಂದ ಯುಕ್ತಿಯೂ ಅದಕ್ಕೆ ಕಾರಣವಾಗಲು ಸಾಧ್ಯವಿಲ್ಲ.

ಆದರೆ ಈ ಕಾರ್ಯಕಾರಣದ ಜ್ಞಾನ ಯುಕ್ತಿ ಅಥವಾ ಆಗಮಗಳಿಂದಲೇ ಹುಟ್ಟಿ ಬರುವ ಜ್ಞಾನ.

ಪ್ರಾಣಿಗಳಿಗೆ ಈ ಜ್ಞಾನವಿದೆ ಎಂದಾದ ಮೇಲೆ ಅದಕ್ಕೆ ಕಾರಣವಾದ ಯುಕ್ತಿ ಆಗಮಗಳು ಇರಲೇ ಬೇಕು. ಆ ಯುಕ್ತಿ ಆಗಮಗಳು ಈ ಜನ್ಮದ್ದಾಗಲು ಸಾಧ್ಯವಿಲ್ಲವಾದ್ದರಿಂದ, ಯುಕ್ತಿ ಆಗಮಗಳಿಂದ ಈ ಜ್ಞಾನವನ್ನು ತಂದುಕೊಂಡ ಬೇರೊಂದು ಜನ್ಮವನ್ನು ಒಪ್ಪಲೇ ಬೇಕು.

ಹೀಗೆಯೇ ಈ ಪ್ರಾಣಿಯಿಂದ, ಇಂಥ ವಸ್ತುವಿನಿಂದ ನನಗೆ ಅಪಾಯ, ಈ ಪ್ರಾಣಿಯಿಂದ, ಇಂಥ ವಸ್ತುವಿನಿಂದ ನನಗೆ ತೊಂದರೆಯಿಲ್ಲ ಎಂಬ ಎಲ್ಲ ಸಹಜಜ್ಞಾನಗಳು ಜನ್ಮಾಂತರದ ಅಸ್ತಿತ್ವವನ್ನು ಪ್ರತಿಪಾದಿಸುತ್ತವೆ.

ಇಲ್ಲಿ ಒಂದು ಆಕ್ಷೇಪ ಹುಟ್ಟಿ ಬರುವ ಸಾಧ್ಯತೆಯಿದೆ. ಈ ಎಲ್ಲ ಪ್ರಾಥಮಿಕ ಜ್ಞಾನಗಳನ್ನು ಪ್ರಕೃತಿದತ್ತ ಎಂದೇಕೆ ಒಪ್ಪಬಾರದು ?

ಪ್ರಕೃತಿಯೇ ಹಾವಿಗೆ ಹದ್ದಿನಿಂದ ಭಯವನ್ನೂ, ಹುಲ್ಲೆಗೆ ಹುಲಿಯಿಂದ ಭಯವನ್ನೂ, ತನ್ನ ತನ್ನ ಆಹಾರವನ್ನು ಪಡೆಯುವ ಕ್ರಮದ ತಿಳುವಳಿಕೆಯನ್ನೂ ಸಹಜವಾಗಿ ಕಲಿಸಿಬಿಟ್ಟಿರುತ್ತದೆ ಎಂದೇಕೆ ಒಪ್ಪಬಾರದು ?

**ತುಂಬ ಪೇಲವವಾದ ಪ್ರಶ್ನೆ. ಪ್ರಕೃತಿ ಹಾವಿನ ದೇಹವನ್ನು ಮಾತ್ರ ನಿರ್ಮಿಸುತ್ತದೆ. ಹಾವಿನ ಒಳಗಿರುವ ಜೀವವನ್ನು ನಿರ್ಮಿಸಿಲ್ಲ. ಹದ್ದಿನಿಂದ ಭಯವಿದೆ ಎಂಬ ಜ್ಞಾನವಿರುವದು ಹಾವಿನ ದೇಹಕ್ಕಲ್ಲ, ಹಾವಿಗೆ. ಹಾವಿನ ದೇಹಕ್ಕೇ ಹದ್ದಿನಿಂದ ಕಂಡು ಭಯವಿದ್ದಿದ್ದರೆ ಸತ್ತ ಹಾವೂ ಕೂಡ ಹದ್ದನ್ನು ಕಂಡು ಹೆದರಿ ಅಡಗಬೇಕು. ಅದು ಸಾಧ್ಯವಿಲ್ಲ.**

ಮತ್ತು, ಆಧುನಿಕರು ಬಳಸು ಈ ಪ್ರಕೃತಿ ಎಂಬ ಶಬ್ದವೇ ತುಂಬ ವಿಚಿತ್ರವಾದದ್ದು. ಇದರ ಬಗ್ಗೆ

ಮತ್ತೊಂದು ಸಂದರ್ಭದಲ್ಲಿ ವಿಸ್ತೃತವಾಗಿ ಚರ್ಚಿಸುತ್ತೇನೆ. ಪ್ರಕೃತಿ ಎಂಬ ಶಬ್ದವನ್ನು ಕಾಡು, ಮರ, ಸಮುದ್ರ, ಎಂಬರ್ಥದಲ್ಲಿ ಬಳಸಲು ಸಾಧ್ಯವೇ ಇಲ್ಲವಾದ್ದರಿಂದ ಅವೆಲ್ಲವನ್ನೂ ನಿಯಮಿಸುವ ಒಂದು ಶಕ್ತಿ ಎಂಬ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಆಗ ನಮ್ಮ ಉತ್ತರವಿಷ್ಟು — ನಿಜ. ಆ ಕಾಣದ ಶಕ್ತಿಯೇ ಜೀವ ಒಂದೊಂದು ಬಾರಿ ಒಂದೊಂದು ದೆಹವನ್ನು ಪ್ರವೇಶಿಸಿದಾಗ ಆಯಾಯ ದೇಹಕ್ಕನುಗುಣವಾದ ಜ್ಞಾನವನ್ನು ಪ್ರಕಟವಾಗುವಂತೆ ನೋಡಿಕೊಳ್ಳುತ್ತದೆ. ಹೊರತು ತಾನೇ ಜ್ಞಾನವನ್ನು ನೀಡುವದಿಲ್ಲ. ಕಾರಣ, ಜೀವನಿಗೆ ಪ್ರತ್ಯಕ್ಷ, ಯುಕ್ತಿ, ಆಗಮಗಳ ಹೊರತಾಗಿ ಬೇರೊಂದು ಪದಾರ್ಥದಿಂದ ಜ್ಞಾನ ಉಂಟಾಗುವದಿಲ್ಲ.

ಇದೇ ಸಂದರ್ಭದಲ್ಲಿ ಮತ್ತೊಂದು ಪ್ರಶ್ನೆಯಿದೆ.

**ಜೀವನಿಗೆ ಹಿಂದಿನ ಜನ್ಮಗಳ ಅನುಭವದ ಪ್ರಕಾರ ಈ ಜನ್ಮದಲ್ಲಿ ಹಾಲು ಕುಡಿಯಲು, ತನ್ನ ಶತ್ರು ಮಿತ್ರರನ್ನು ಗುರುತಿಸಲು ಸಾಧ್ಯವಾಗುವದಾದರೆ ಹಿಂದಿನ ಜನ್ಮದ ಎಲ್ಲ ನೆನಪುಗಳೂ ಏಕೆ ಉಂಟಾಗುವದಿಲ್ಲ ?**

ಈ ಪ್ರಶ್ನೆಗೆ ಎರಡು ಉತ್ತರಗಳಿವೆ. ಹಿಂದಿನ ಜನ್ಮವೊಂದಷ್ಟೆ ಅಲ್ಲ, ನಮ್ಮ ಎಲ್ಲ ಜನ್ಮಗಳ ನೆನಪೂ ಪರಿಸ್ಪಷ್ಟವಾಗಿ ನೆನಪಾಗಲು ಸಾಧ್ಯವಿದೆ. ನಮ್ಮ ನೆನಪಿನ ಶಕ್ತಿ ಪ್ರಬಲವಾಗಿದ್ದಾಗ ಮಾತ್ರ. ನೆನಪುಗಳಿರುವದು ಮನುಷ್ಯನ ಮನಸ್ಸಿನಲ್ಲಿ. ಈ ಮನಸ್ಸು ಅತ್ಯಂತ ದುರ್ಬಲ ಮತ್ತು ಸಂಕೀರ್ಣ. ಹೀಗಾಗಿ ಆ ಎಲ್ಲ ನೆನಪುಗಳನ್ನು ಹೆಕ್ಕಿ ತೆಗೆಯುವ ಶಕ್ತಿ ಅದಕ್ಕಿಲ್ಲ. ಆ ಶಕ್ತಿಯನ್ನು ನಾವು ಗಳಿಸಿಕೊಂಡರೆ ನಮ್ಮ ಜನ್ಮಗಳಷ್ಟೇ ಏನು, ನಮಗೆ ಸಂಬಂಧಪಟ್ಟವರ ಹಿಂದಿನ ಜನ್ಮಗಳ ಬಗೆಯೂ ನೆನಪು ಮಾಡಿಕೊಳ್ಳಬಲ್ಲೆವು. ಈ ಮನಸ್ಸಿನ ಶಕ್ತಿಯನ್ನು ಜಾಗೃತ-ಪ್ರಬಲಗೊಳಿಸುವದರ ಪ್ರಕ್ರಿಯೆಯ ಕುರಿತು ಶಾಸ್ತ್ರಗಳಲ್ಲಿ ಪೂರ್ಣ

ಮಾಹಿತಿ ದೊರಕುತ್ತದೆ. (ಭಗವದ್ಗೀತೆಯ ಆರನೆಯ ಅಧ್ಯಾಯದ ಅನುವಾದ ಉಪನ್ಯಾಸಗಳ ಸಂದರ್ಭದಲ್ಲಿ, ಹತ್ತಾರು ಗ್ರಂಥಗಳಲ್ಲಿ ಅಡಕವಾಗಿರುವ ಆ ಪ್ರಕ್ರಿಯೆಯನ್ನು ಒಂದೆಡೆ ಸಂಗ್ರಹಿಸಿ ನೀಡಲಿದ್ದೇನೆ. ಶಾಸ್ತ್ರ ಹೇಳಿದ ರೀತಿಯಲ್ಲಿ ಸರಿಯಾಗಿ ಪ್ರಯತ್ನಿಸಿದರೆ ಜನ್ಮಾಂತರಗಳ ಜ್ಞಾನ ನಿಶ್ಚಿತವಾಗಿ ಉಂಟಾಗುತ್ತದೆ. ಸಂಶಯವಿಲ್ಲ )

ಎರಡನೆಯ ಉತ್ತರ. ಮನುಷ್ಯನ ಮನಸ್ಸಿಗೆ ತನಗೆ ತುಂಬ ಇಷ್ಟವಾದದ್ದನ್ನು ಮಾತ್ರ ಎಂದಿಗೂ ಮರೆಯದೆ ನೆನಪಿನಲ್ಲಿಟ್ಟುಕೊಳ್ಳುವ ಶಕ್ತಿಯಿದೆ. ಆ ಸಾಮರ್ಥ್ಯದಿಂದಲೇ ನಾವು ಹಾಲು ಕುಡಿಯುವ ಕ್ರಮವನ್ನು ನೆನಪಿನಲ್ಲಿಟ್ಟುಕೊಂಡಿರುತ್ತೇವೆ. ಅದರಲ್ಲಿಯೂ ಸಾವು ಬದುಕಿನ ಪ್ರಶ್ನೆ ಬಂದಾಗ ಮನಸ್ಸು ಮತ್ತಷ್ಟು ಜಾಗೃತವಾಗಿ ಆ ನೆನಪನ್ನು ಹೆಕ್ಕಿ ತೆಗೆದುಬಿಡುತ್ತದೆ. ಎಂದೋ ಬಾಲ್ಯದಲ್ಲಿ ಕಲಿತ ಈಜು, ಐವತ್ತು ವರ್ಷಗಳ ಬಳಿಕ ಅಚಾನಕ್ಕಾಗಿ ನೀರಿಗೆ ಬಿದ್ದಾಗ, ಅಭ್ಯಾಸ ಪೂರ್ಣ ತಪ್ಪಿ ಹೋಗಿದ್ದರೂ ನೆನಪಿಗೆ ಬರುವ ಹಾಗೆ. ಪ್ರತಿಯೊಬ್ಬ ಜೀವನಿಗೂ ಬದುಕು ಎಂದರೆ ಪ್ರಾಣ. ಹೀಗಾಗಿ

ಬದುಕಿಗೆ ಅತ್ಯವಶ್ಯವಾಗಿ ಬೇಕಾದ್ದನ್ನು, ತನ್ನ ಬದುಕಿಗೆ ವಿರೋಧಿಯಾದದ್ದನ್ನು ನೆನೆಪಿನಲ್ಲಿಟ್ಟುಕೊಂಡಿರುತ್ತಾನೆ. ಉಳಿದ ನೆನಪುಗಳು ತುಂಬ ಕಷ್ಟ ಪಟ್ಟು ಹೆಕ್ಕಿ ತೆಗೆದರೆ ಮರುಕಳಿಸುತ್ತವೆ.

ಇನ್ನೂ , ತುಂಬ ವಿರಳವಾಗಿ ಕೆಲವರಲ್ಲಿ ಮಾತ್ರ ಹಿಂದಿನ ಜನ್ಮದ ನೆನಪುಗಳು ಮರುಕಳಿಸುತ್ತವೆ. ಅನೇಕ ಜನ ಸಂಶೋಧಕರು ಇಂಥಹ ಘಟನೆಗಳನ್ನು ಒಂದೆಡೆ ಸೇರಿಸಿ ಪುಸ್ತಕಗಳನ್ನು ಬರೆದಿದ್ದಾರೆ. ಪ್ರಾಮಾಣಿಕ ಆಧಾರವಿರುವ ಘಟನೆಗಳನ್ನು ಒಪ್ಪದೇ ಇರಲು ಸಾಧ್ಯವಿಲ್ಲ. ಹೀಗಾಗಿ ಅಂಥಹ ಅನುಭವಗಳು ಜನ್ಮಾಂತರದ ಅಸ್ತಿತ್ವವನ್ನು ಸಮರ್ಥಿಸುತ್ತವೆ. ಆದರೆ, ಇಂಥಹ ಘಟನೆಗಳ ಆವಶ್ಯಕತೆಯಿಲ್ಲದೆಯೇ ಜೀವಜಾತದ ಸಹಜಪ್ರವೃತ್ತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಜನ್ಮಾಂತರದ ಅಸ್ತಿತ್ವವನ್ನು ಒಪ್ಪದೇ ಇರಲು ಸಾಧ್ಯವಿಲ್ಲ ಎಂದು ಪಕ್ವಬುದ್ಧಿಯ ಜನರಿಗೆ ಮನದಟ್ಟಾಗಿಬಿಡುತ್ತದೆ. ಅವರಿಗೆ ಇಂಥಹ ಘಟನೆಗಳ ಆವಶ್ಯಕತೆಯಿಲ್ಲ. ಆಳವಾಗಿ ವಿಚಾರ ಮಾಡಿ ನಿರ್ಣಯಿಸುವಷ್ಟು ಬುದ್ಧಿಸೂಕ್ಷ್ಮತೆ

ಇಲ್ಲದವರಿಗೆ ಇವು ಜನ್ಮಾಂತರದ ಅಸ್ತಿತ್ವವನ್ನು ಒಪ್ಪಲು ಪ್ರಬಲ ಕಾರಣವಾಗಬಲ್ಲವು ಎಂದು ಮಹಾಭಾರತ ತಿಳಿಸುತ್ತದೆ.

ಅಷ್ಟೆ ಅಲ್ಲ, ಜನ್ಮಾಂತರದ ಸ್ಮರಣೆಗಳು ಉಂಟಾಗುವ ಹಿಂದಿನ ಕಾರಣವನ್ನೂ ಅದು ತಿಳಿಸುತ್ತದೆ. ಅನುಶಾಸ್ತ್ರನಪರ್ವದ ಉಮಾಶಂಕರ ಸಂವಾದದಲ್ಲಿ ಚರ್ಚೆಯಾದ ವಿಷಯವಿದು.

**ಯೇ ಮೃತಾಃ ಸಹಸಾ ಮರ್ತ್ಯಾ**
**ಜಾಯಂತೇ ಸಹಸಾ ಪುನಃ |**
**ತೇಷಾಂ ಪೌರಾಣಿಕೋ ಬೋಧಃ**
**ಕಂಚಿತ್ ಕಾಲಂ ಹಿ ತಿಷ್ಠತಿ ||**

**ತೇಷಾಂ ವಿವರ್ಧತಾಂ ಸಂಜ್ಞಾ**
**ಸ್ವಪ್ನವತ್ ಸಾ ಪ್ರಣಶ್ಯತಿ |**
**ಪರಲೋಕಸ್ಯ ಚಾಸ್ತಿತ್ವೇ**
**ಮೂಢಾನಾಂ ಕಾರಣಂ ಚ ತತ್ ||**

“ಸತ್ತೊಡನೆಯೇ ಸ್ವರ್ಗ ನರಕಗಳಿಗೆ ಹೋಗದೆ, ತಕ್ಷಣ ಮತ್ತೊಬ್ಬ ತಾಯಿಯಲ್ಲಿ ಜನಿಸಿ ಬರುವ

ಜನರಿಗೆ ಕೆಲವು ಕಾಲ ಹಿಂದಿನ ಜನ್ಮದ ನೆನಪು ಉಳಿದಿರುತ್ತದೆ. ಬೆಳೆಯುತ್ತಿದ್ದಂತೆ ಆ ನನೆಪೂ ಕನಸಿನಂತೆ ಕರಗಿಬಿಡುತ್ತದೆ. ತುಂಬ ಮಂದಬುದ್ಧಿಯ ಜನರಿಗೆ ಪರಲೋಕ ಜನ್ಮಾಂತರಗಳ ಅಸ್ತಿತ್ವವನ್ನು ಒಪ್ಪಲು ಇದು ಆಧಾರವಾಗುತ್ತದೆ.”

ಮತ್ತೂ ಒಂದು ಮಾತನ್ನು ನಾನಿಲ್ಲಿ ಹೇಳಬೇಕು. ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಸಂದರ್ಭದಲ್ಲಿ ಯಾವುದೋ ಒಂದು ವಸ್ತುವನ್ನೋ, ಸ್ಥಳವನ್ನೋ, ವ್ಯಕ್ತಿಯನ್ನೋ ಮೊದಲ ಬಾರಿಗೆ ಕಂಡಾಗ ನಾನಿದನ್ನು ಮೊದಲೇ ನೋಡಿದ್ದೇನೆ ಎಂದೆನಿಸುತ್ತದೆ. ಬಹಳಷ್ಟು ಬಾರಿಯಲ್ಲದಿದ್ದರೂ ಜೀವನದಲ್ಲಿ ಒಂದೆರಡು ಬಾರಿಯಾದರೂ ಇಂಥ ಅನುಭವಗಳಾಗಿರುತ್ತವೆ.

ಹರಿಭಕ್ತಿಸಾರದಲ್ಲೊಂದು ಜನ್ಮಾಂತರಗಳ ಕುರಿತು ತುಂಬ ಸ್ವಾರಸ್ಯಪೂರ್ಣ ನುಡಿಯಿದೆ —

ಊರು ತನಗೊಂದಿಲ್ಲ,
ಪೊತ್ತ ಶರೀರಗಳ ಮಿತಿಯಿಲ್ಲ

ತಾ ಸಂಚಾರಿಸದ ಸ್ಥಳವಿಲ್ಲ
ನುಡಿಯದ ಭಾಷೆ ಮತ್ತಿಲ್ಲ.
ಬೇರೆ ಹೊಸತೊಂದಿಲ್ಲ
ಉಣ್ಣದಸಾರ ವಸ್ತುಗಳಿಲ್ಲ
ತನುಸಂಚಾರವೀ ಬಗೆಯಾಯ್ತು
ರಕ್ಷಿಸು ನಮ್ಮನನವರತ ||

ಇಷ್ಟೇ ಅಲ್ಲದೇ, ನಮಗೆ ಬೀಳುವ ಕನಸುಗಳೂ ಸಹಿತ ಜನ್ಮಾಂತರಗಳ ಅಸ್ತಿತ್ವವನ್ನು ಸಮರ್ಥಿಸುತ್ತವೆ ಎಂದು ಶ್ರೀಮದಾಚಾರ್ಯರು ಪ್ರತಿಪಾದಿಸುತ್ತಾರೆ. ತುಂಬ ವಿಸ್ತೃತವಾದ ವಿಷಯ. ಇವತ್ತಿನ ಮನಃಶಾಸ್ತ್ರಕ್ಕೊಂದು ಹೊಸ ಆಯಾಮವನ್ನು ನೀಡಬಲ್ಲ ಆಚಾರ್ಯರ ಸಿದ್ಧಾಂತ.

ವಿಶ್ವನಂದಿನಿಯ ಮಾಲಿಕೆಯಲ್ಲಿ ಕನಸುಗಳ ಕುರಿತೇ ಮೂರ್ನಾಕು ಹೊತ್ತಿಗೆಗಳು ಬರಲಿವೆ. ಅದರಲ್ಲಿ ಆಚಾರ್ಯರ ಆ ಎಲ್ಲ ಮಾತುಗಳನ್ನು ಅನುವಾದಿಸಿ ನೀಡುತ್ತೇನೆ.

ಹೀಗೆ ತತ್ವವಾದಿಗಳು ಜನ್ಮಾಂತರಗಳ ಅಸ್ತಿತ್ವವನ್ನು ಸಮರ್ಥಿಸಿ ಅದಕ್ಕೆ ಉಪೋದ್ಬಲಕವಾಗಿ ಹತ್ತಾರು

ಪ್ರಮಾಣಗಳನ್ನು ಒದಗಿಸುತ್ತಾರೆ. ಕೆಲವನ್ನು ಕೆಳಗೆ ನೀಡಿದ್ದೇನೆ.
ಗೀತೆಯಲ್ಲಿ ಶ್ರೀಕೃಷ್ಣ ಜನ್ಮಾಂತರಗಳ ಕುರಿತು ಅನೇಕ ಬಾರಿ ಮಾತನಾಡಿದ್ದಾನೆ.

ಬಹೂನಿ ಮೇ ವ್ಯತೀತಾನಿ
ಜನ್ಮಾನಿ ತವ ಚಾರ್ಜುನ
ತಾನ್ಯಹಂ ವೇದ ಸರ್ವಾಣಿ
ನ ತ್ವಂ ವೇತ್ಥ ಪರಂತಪ ‖

“ನಾನು ಬಹಳಷ್ಟು ಅವತಾರಗಳನ್ನು ಎತ್ತಿ ಬಂದಿದ್ದೇನೆ. ನಿನ್ನದೂ ಸಾವಿರಾರು ಜನ್ಮಗಳು ಕಳೆದಿವೆ. ಅವೆಲ್ಲವನ್ನೂ ಯಾವಾಗ ಎಲ್ಲಿ ಹೇಗೆ ಎಂಬುದನ್ನು ನಾನು ತಿಳಿದಿದ್ದೇನೆ. ನಿನಗೆ ನನ್ನಷ್ಟು ಸ್ಪಷ್ಟವಾಗಿ ತಿಳಿದಿಲ್ಲ”

ಬಹೂನಾಂ ಜನ್ಮನಾಮಂತೇ
ಜ್ಞಾನವಾನ್ ಮಾಂ ಪ್ರಪದ್ಯತೇ

“ಅನೇಕ ಜನ್ಮಗಳ ಸಾಧನೆಯಿಂದ ಮನುಷ್ಯ ಜ್ಞಾನಿಯಾಗುತ್ತಾನೆ. ಆ ಬಳಿಕ ನನ್ನನ್ನು ಸೇರುತ್ತಾನೆ.”

ಅನೇಕಜನ್ಮಸಂಸಿದ್ಧ-
ಸ್ತತೋ ಯಾತಿ ಪರಾಂ ಗತಿಮ್ ॥

“ಯೋಗಿಯಾದವನು ಅನೇಕಜನ್ಮಗಳ ಸಾಧನೆಯ ಫಲವಾಗಿ ಭಗವತ್ಸಾಕ್ಷಾತ್ಕಾರವನ್ನು ಪಡೆದು ಆ ನಂತರ ಮುಕ್ತನಾಗುತ್ತಾನೆ.”

ಆಸುರೀಂ ಯೋನಿಮಾಪನ್ನಾ
ಮೂಢಾ ಜನ್ಮನಿ ಜನ್ಮನಿ
ಮಾಮಪ್ರಾಪ್ಯೈವ ಕೌಂತೇಯ
ತತೋ ಯಾಂತ್ಯಧಮಾಂ ಗತಿಮ್ ॥

“ರಾಕ್ಷಸಬುದ್ಧಿಯ ದುಷ್ಟ ಜನರು, ಅಂಥ ಜನರ ಮಧ್ಯದಲ್ಲಿಯೇ ಹುಟ್ಟಿ ಬಂದು ಪ್ರತೀ ಜನ್ಮದಲ್ಲಿಯೂ ಭಗವಂತನ ಬಗ್ಗೆ ತಿಳಿಯದೇ, ತಿಳಿಯಲೂ ಪ್ರಯತ್ನಿಸದೇ, ಕೇವಲ ವಿಷಯಲಂಪಟರಾಗಿ, ಲೋಕಕಂಟಕರಾಗಿ

ಬಾಳುತ್ತ ನೀಚಗತಿಯನ್ನು ಪಡೆಯುತ್ತಾರೆ"

ಭಾಗವತದಲ್ಲಿ ನಾರದರು ಸ್ವಯಂ ತಮ್ಮ ಪೂರ್ವಜನ್ಮದ ವೃತ್ತಾಂತವನ್ನು ವ್ಯಾಸರ ಮುಂದೆ ನಿವೇದಿಸಿಕೊಂಡ ಉಲ್ಲೇಖವಿದೆ.

**ಅಹಂ ಪುರಾತೀತಭವೇಭವಂ ಮುನೇ**
**ದಾಸ್ಯಾಸ್ತು ಕಸ್ಯಾಶ್ಚನ ವೇದವಾದಿನಾಮ್**

"ಭಗವನ್ ವ್ಯಾಸರೇ, ಹಿಂದಿನ ಜನ್ಮದಲ್ಲಿ ನಾನು ವೇದಜ್ಞರಾದ ಬ್ರಾಹ್ಮಣೋತ್ತಮರ ಮನೆಗೆಲಸ ಮಾಡುತ್ತಿದ್ದ ಸಾಧ್ವಿಯಾದ ಒಬ್ಬ ಶೂದ್ರ ಹೆಣ್ಣುಮಗಳ ಮಗನಾಗಿ ಹುಟ್ಟಿ ಬಂದಿದ್ದೆ."
ಒಟ್ಟಿನಲ್ಲಿ ಜನ್ಮಾಂತರಗಳ ಅಸ್ತಿತ್ವವನ್ನು ಒಪ್ಪದ ಗ್ರಂಥವು ನಮ್ಮಲ್ಲಿಲ್ಲ. ಪ್ರತಿಯೊಂದು ದರ್ಶನವೂ ಈ ವಿಷಯದಲ್ಲಿ ಐಕಮತ್ಯವನ್ನು ಹೊಂದಿವೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491